ದಿನಾಂಕ 21–02–2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 1 ನೇ ಪರ ಶ್ರೀ ಎಸ್.ಆರ್.ಬಿ. ವಕೀಲರಿಂದ

8. ಈ ದಾವೆಯನ್ನು ಹಾಕಲು ನಮ್ಮ ವಕೀಲರಿಗೆ ನಾವೇ ಮಾಹಿತಿ ಕೊಟ್ಟಿರುತ್ತೇವೆ. ನಾವೇ ಎಂದರೆ ತಾಯಿ ಮಾಹಿತಿ ಕೊಟ್ಟ ನಂತರ ನಾನು ಕೂಡ ಕೊಟ್ಟಿದ್ದೇನೆ. ಈ ದಾವೆಗೆ ದಾಖಲೆಗಳನ್ನು ನಾನೇ ಕುಟುಂಬದ ವತಿಯಿಂದ ಕೊಟ್ಟಿದ್ದೇನೆ. ನಾನು ಎಲೆಕ್ಟ್ರಿಕಲ್ ಡಿಪ್ಲೋಮ ವ್ಯಾಸಾಂಗ ಮಾಡಿದ್ದು, ಹೆಸ್ಕಾಂನಲ್ಲಿ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈಗಲೂ ಕರ್ತವ್ಯದಲ್ಲಿದ್ದು, ಈ ದಿನ ರಜೆ ಹಾಕಿ ಬಂದಿದ್ದೇನೆ.

9. 1 ನೇ ಪ್ರತಿವಾದಿ ಸಲ್ಲಿಸಿದ ಲಿಖಿತ ಪ್ರತಿವಾದ ಪತ್ರದ ಸಂಗತಿಗಳನ್ನು ಓದಿ ತಿಳಿದುಕೊಂಡಿದ್ದೇನೆ. ಅದರಲ್ಲಿ ಹೇಳಿರುವ ವಂಶಾವಳಿಯನ್ನು ನಾನು ಪರಿಶೀಲಿಸಿದ್ದೇನೆ. ನನ್ನ ವಂಶಾವಳಿಯಲ್ಲಿ ತೋರಿಸಿದ ಖೇಮು ನನ್ನ ಮುತ್ತಜ್ಜನ ತಂದೆಯಾಗಿರುತ್ತಾರೆ. ಸದ್ರಿ ಖೇಮು ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಸರಿಯಾದ ಮಾಹಿತಿ ಇಲ್ಲ ಎಂದರೆ ಸರಿ. ಅಜ್ಜಣ್ಣನಿಗೆ 5 ಜನ ಮಕ್ಕಳು. ಅವರ ಪೈಕಿ 4 ಜನ ಗಂಡು ಮಕ್ಕಳು ಹಾಗೂ ಒಬ್ಬರು ಹೆಣ್ಣು ಮಗಳು. ಪುರುಷೋತ್ತಮ, ಕೃಷ್ಣ, ವಾಸುದೇವಾ ಹಾಗೂ ಸಣ್ಣತಮ್ಮ ಆ 4 ಜನ ಗಂಡು ಮಕ್ಕಳು. ದುಂಬಿ ಸದ್ರಿ ಹೆಣ್ಣು ಮಗಳು ಆಗಿರುತ್ತಾರೆ. ಅಜ್ಜಣ್ಣನಿಗೆ 6 ಜನ ಮಕ್ಕಳು ಎಂದರೆ ಸಾಕ್ಷಿ ಇರಬಹುದು ಹಾಗೂ ಒಬ್ಬರು ಮೊದಲೆ ಮೃತಪಟ್ಟಿದ್ದಾರೆ ಎಂದು ತಂದೆ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಅಜ್ಜಣ್ಣನಿಗೆ ಒಟ್ಟು 6 ಜನ ಮಕ್ಕಳಿದ್ದರು ಕೂಡ ನನ್ನ ವಂಶಾವಳಿಯಲ್ಲಿ 3 ಜನ ಮಕ್ಕಳನ್ನು ಮಾತ್ರ ತೋರಿಸಿದ್ದೇನೆ ಎಂದರೆ ಸಾಕ್ಷಿ ದಾವಾ ಆಸ್ತಿಯನ್ನು ಸದ್ರಿ 3 ಜನ ಮಕ್ಕಳು ಮಾತ್ರ ವ್ಯವಸಾಯ ಮಾಡುತ್ತಿದ್ದುದರಿಂದ 3 ಜನರನ್ನು ಮಾತ್ರ ನನ್ನ ವಂಶಾವಳಿಯಲ್ಲಿ ತೋರಿಸಿದ್ದೇನೆ ಎಂದು

ನುಡಿಯುತ್ತಾರೆ. ಸ್ವದ್ರಿ ಕೃಷ್ಣರವರಿಗೆ 3 ಜನ ಮಕ್ಕಳು. ಅವರು ಎಂದರೆ ಲೀಲಾ, ಕುಸುಮಾ ಮತ್ತು 1 ನೇ ಪ್ರತಿವಾದಿ. ಆ ಇಬ್ಬರು ಸಹೋದರಿಯರನ್ನು ನನ್ನ ವಂಶಾವಳಿಯಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿ ಆಸ್ತಿ 1 ನೇ ಪ್ರತಿವಾದಿ ಹೆಸರಿನಲ್ಲಿ ಇದ್ದುದರಿಂದ ಅವರನ್ನು ತೋರಿಸಿಲ್ಲ ಎಂದು ನುಡಿಯುತ್ತಾರೆ.

10. ಸ್ವದ್ರಿ ಪುರುಷೋತ್ತಮರಿಗೆ 5 ಜನ ಮಕ್ಕಳು. ಅವರುಗಳೆಂದರೆ ರಾಮಚಂದ್ರ, ಗೋಪು, ಪೀರು, ಸಾತು ಹಾಗೂ ಗುಲಾಬಿ ಎಂದರೆ ಸರಿ. ಸ್ವದ್ರಿ ಗುಲಾಬಿಗೆ 3 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಸ್ವದ್ರಿ ಗುಲಾಬಿ ಹಾಗೂ ಅವರ 3 ಮಕ್ಕಳನ್ನು ನನ್ನ ವಂಶಾವಳಿಯಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿ ಅವರಿಗೆ ದಾವಾ ಜಮೀನಿನಲ್ಲಿ ಯಾವುದೇ ಹಕ್ಕಿಲ್ಲ ಆದರಿಂದ ತೋರಿಸಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಸಹೋದರ ಗೋಪುರವರಿಗೆ ಪ್ರತಿವಾದಿ 6 ಸಹಿತ 5 ಜನ ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ಆ 5 ಜನ ಹೆಣ್ಣು ಮಕ್ಕಳನ್ನು ಕೂಡ ತೋರಿಸಿಲ್ಲ ಎಂದರೆ ಸಾಕ್ಷಿ ಅವರ ಕವಲಿಗೆ ಗಂಡು ಮಗನನ್ನು ಮುಖ್ಯಸ್ಥ ಎಂದು ತೋರಿಸಿದ್ದೇನೆ ಎಂದು ನುಡಿಯುತ್ತಾರೆ. ಸಾತುರವರಿಗೆ 4 ಜನ ಮಕ್ಕಳು ಎಂದರೆ ಸಾಕ್ಷಿ 3 ಜನ ಇದ್ದು, ಒಬ್ಬರನ್ನು ಅವರ ಅಣ್ಣ ಪೀರುವಿಗೆ ದತ್ತಕವಾಗಿ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಪೀರುರವರಿಗೆ ದತ್ತಕವಾಗಿ ಪ್ರತಿವಾದಿ 7 ಅನ್ನು ಕೊಟ್ಟಿದ್ದಾರೆ ಎಂದು ತೋರಿಸುವ ದಾಖಲೆ ನಾನು ಹಾಜರುಪಡಿಸಿರುವುದಿಲ್ಲ. ಸಾತುರವರಿಗೆ 4 ಜನ ಮಕ್ಕಳಿದ್ದರು ಕೂಡ ನನ್ನ ವಂಶಾವಳಿಯಲ್ಲಿ 2 ಜನರನ್ನು ಮಾತ್ರ ತೋರಿಸಿದ್ದೇನೆ ಎಂದರೆ ಸಾಕ್ಷಿ ಹೆಣ್ಣು ಮಕ್ಕಳು ನಮಗೇನು ಬೇಡ ಎಂದು ಹೇಳಿರುವುದರಿಂದ ಅವರನ್ನು ತೋರಿಸಿಲ್ಲ ಎಂದು ನುಡಿಯುತ್ತಾರೆ. ಅಜ್ಜಣ್ಣನ ಕುಟುಂಬಕ್ಕೆ ಎಷ್ಟು ಜನ ಸದಸ್ಯರಿದ್ದಾರೆಂದು ಗೊತ್ತಿಲ್ಲದೆ ಇದ್ದರು ಸುಳ್ಳು ಮಾಹಿತಿಯಾಗಿ ಸುಳ್ಳು ವಂಶಾವಳಿಯನ್ನು ತೋರಿಸಿದ್ದೇನೆ

ಎಂದರೆ ಸಾಕ್ಷಿ 3 ಜನ ಮಾತ್ರ ದಾವಾ ಜಮೀನಿನಲ್ಲಿ ವಹಿವಾಟು ಮಾಡಿಕೊಂಡು ಬಂದಿರುವುದರಿಂದ ಉಳಿದವರನ್ನು ತೋರಿಸಿಲ್ಲ ಎಂದು ನುಡಿಯುತ್ತಾರೆ.

11. ನಾನು ನನ್ನ ದಾವೆಯಲ್ಲಿ ಖೇಮು ಮೂಲ ಪುರಷ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಈ ಜಮೀನುಗಳಿಗೆ ಅಜ್ಜಣ್ಣ ಮೂಲ ಪುರುಷನಾಗಿರುತ್ತಾರೆ ಎಂದು ನುಡಿಯುತ್ತಾರೆ. ಮೂಲತ ದಾವಾ ಸ್ವತ್ತುಗಳು ಅಜ್ಜಣ್ಣನ ಹೆಸರಿನಲ್ಲಿತ್ತು. ಅಜ್ಜಣ್ಣನಲ್ಲಿ ದಾವಾ ಸ್ವತ್ತುಗಳಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಆ ಬಗ್ಗೆ ಮ್ಯುಟೇಶನ್ ವಹಿಯನ್ನು ಹಾಜರುಪಡಿಸಿದ್ದೇನೆ.

**ಪಾಟೀ ಸವಾಲುಃ** ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.